ಕರ್ನಾಟಕ ಸರ್ಕಾರ

ಸಂ:ಗ್ರಾಅಪ 51 ಗ್ರಾನೀಸ(4)2014

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:29.3.2014

## ಸುತ್ತೋಲೆ

ವಿಷಯ: ಸಾರ್ವಜನಿಕ ಕೊಳವೆ ಬಾವಿಗಳ ಕುಡಿಯುವ ನೀರಿನ ಇಳುವರಿ ಉತ್ತಮಪಡಿಸಲು ಕ್ರಮದ ಕುರಿತು.

ಉಲ್ಲೇಖ: 1. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 489 ಗ್ರಾನೀಸ(5) 2000,ದಿನಾಂಕ:24.12.2003.
2. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 62 ಗ್ರಾನೀಸ(4) 2004, ದಿನಾಂಕ:30.07.2004.

---

ರಾಜ್ಯದಲ್ಲಿ ಗ್ರಾಮೀಣ ಪ್ರದೇಶಗಳ ಕುಡಿಯುವ ನೀರಿನ ವ್ಯವಸ್ಥೆ ಸಲುವಾಗಿ ಕೊರೆದಿರುವ ಸಾರ್ವಜನಿಕ ಕುಡಿಯುವ ನೀರಿನ ಕೊಳವೆ ಬಾವಿಗಳನ್ನು ಹೈಡ್ರೋಫ್ರಾಕ್ಚರಿಂಗ್ ಮುಖೇನ ಪುನ:ಶ್ಚೇತನಗೊಳಿಸುವ ಸಲುವಾಗಿ ಈಗಾಗಲೇ ಮೇಲೆ ಹೇಳಿರುವ ಸುತ್ತೋಲೆಗಳಲ್ಲಿ ಅಗತ್ಯ ನಿರ್ದೇಶನಗಳನ್ನು ನೀಡಲಾಗಿದೆ.

ಪ್ರಸಕ್ತ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಹಾಲಿಯಿರುವ ಕುಡಿಯುವ ನೀರಿನ ಯೋಜನೆಗಳ ಜಲಮೂಲಗಳನ್ನು ಪುನ:ಶ್ಚೇತನಗೊಳಿಸುವುದು / ಅಭಿವೃದ್ಧಿಗೊಳಿಸುವುದು ಸಮಯೋಚಿತವಾದ ಕ್ರಮವಾಗಲಿದೆ.

ಈ ಹಿನ್ನೆಲೆಯಲ್ಲಿ, ಇಳುವರಿ ಕಡಿಮೆಯಾಗಿರುವ ಕೊಳವೆ ಬಾವಿಗಳ ಜಲಮೂಲಗಳನ್ನು ಆದ್ಯತೆ ಮೇಲೆ ಪುನ:ಶ್ಚೇತನಗೊಳಿಸಲು ಭೂ ವಿಜ್ಞಾನಿಗಳ ಸಲಹೆ ಪಡೆದು,

1. ಕೊಳವೆ ಬಾವಿಗಳನ್ನು ಸ್ವಚ್ಛಗೊಳಿಸುವುದು(ಫ್ಲಷಿಂಗ್)
2. ಆಳ ಹೆಚ್ಚಿಸುವುದು (ಡೀಪೆನಿಂಗ್) ಮತ್ತು
3. ಹೈಡ್ರೋಫ್ರಾಕ್ಚರಿಂಗ್ ಮಾಡುವ ಪರಿಕ್ರಮಗಳನ್ನು ಅನುಸರಿಸಬೇಕು.

ಮೇಲ್ಕಂಡ ವಿಧಾನಗಳಡಿ ಹಾಲಿಯಿರುವ ಕೊಳವೆ ಬಾವಿಗಳನ್ನು ಪುನ:ಶ್ಚೇತನಗೊಳಿಸಲು ಸಾಧ್ಯವಿಲ್ಲವೆಂದು ಕಂಡುಬಂದಲ್ಲಿ ಟೆರಾ ಮೀಟರ್ / ಭೂ ವಿಜ್ಞಾನಿಗಳ ಸಲಹೆ ಆಧರಿಸಿ ಹೊಸ ಕೊಳವೆ ಬಾವಿಗಳನ್ನು ಕೊರೆಯಲು ಕ್ರಮವಹಿಸಬೇಕು.

ಈ ರೀತಿ ಪುನ:ಶ್ಚೇತನಗೊಳಿಸುವ ಮತ್ತು ಹೊಸ ಕೊಳವೆ ಬಾವಿಗಳನ್ನು ಕೊರೆಯುವ ಕಾಮಗಾರಿಗಳನ್ನು GPS ಬಳಕೆ ಮೂಲಕ Coordinates ಹಾಗೂ Time referenceನ್ನು ಕಡತದಲ್ಲಿ ಮತ್ತು ಗಾಂಧಿಸಾಕ್ಷಿ ಕಾಯಕದಲ್ಲಿ ದಾಖಲಿಸಬೇಕು. ಹೈಡ್ರೋಫ್ರಾಕ್ಚರಿಂಗ್ ಸಲುವಾಗಿ ಮೊದಲು ಸರ್ಕಾರಿ HF unitಗಳನ್ನು ಸಮರ್ಪಕವಾಗಿ ಬಳಸಿಕೊಳ್ಳತಕ್ಕದ್ದು.

ಮುಂದುವರಿದಿದೆ........

ಒಂದು ವೇಳೆ ಅಗತ್ಯವಿರುವಷ್ಟು ಹೈಡ್ರೋಫ್ರಾಕ್ಚರಿಂಗ್ ರಿಗ್ ಯಂತ್ರಗಳು ಲಭ್ಯವಿಲ್ಲದಿದ್ದಲ್ಲಿ ಮಾತ್ರ ಖಾಸಗಿ ರಿಗ್‌ಗಳ ಸೇವೆಯನ್ನು **KTPP** ಕಾಯ್ದೆ ಹಾಗೂ ನಿಯಮಾನುಸಾರ ಬಳಸಿಕೊಂಡು ಕುಡಿಯುವ ನೀರಿನ ಯೋಜನೆಗಳು ಜಾಗ್ರತೆಯಾಗಿ ಫಲಪ್ರದವಾಗುವಂತೆ ಭೂ ವಿಜ್ಞಾನಿಗಳ ಸಲಹೆ ಆಧರಿಸಿ ಆಯಾ ಜಿಲ್ಲಾ ಪಂಚಾಯತಿಗಳ ವ್ಯಾಪ್ತಿಯ PREDಗಳು ಕ್ರಮವಹಿಸಬಹುದಾಗಿದೆ.

ಈ ನಿಬಂಧನೆಗೊಳಪಟ್ಟು **KTPP** ಕಾಯ್ದೆ ಹಾಗೂ ನಿಯಮ ಅನುಸರಿಸಿ ಬಾಡಿಗೆ ಆಧಾರದ ಮೇಲೆ ಖಾಸಗಿ ಹೈಡ್ರೋಫ್ರಾಕ್ಚರಿಂಗ್ ಯಂತ್ರಗಳ ಸೇವೆ ಪಡೆದುಕೊಳ್ಳಲು ಜಿಲ್ಲಾ ಪಂಚಾಯತಿಗಳಿಗೆ ಅನುಮತಿಸಿದೆ.

29/3/14

(ರಾಮಕೃಷ್ಣ)
ಸರ್ಕಾರದ ಉಪ ಕಾರ್ಯದರ್ಶಿ(ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್. ಇಲಾಖೆ.
ಇಮೇಲ್:rk3452000@gmail.com
ಫೋನ್:22032806, ಫ್ಯಾಕ್ಸ್:22203175

ಇವರಿಗೆ:

1. ರಾಜ್ಯದ ಎಲ್ಲಾ (30) ಜಿಲ್ಲಾ ಪಂಚಾಯತ್‌ಗಳ ಅಧ್ಯಕ್ಷರುಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ಸಂಕೀರ್ಣ, ನಂ.55, 4ನೇ ಮಹಡಿ, ಅಭಯ ಕಾಂಪ್ಲೆಕ್ಸ್, ರಿಸಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು-20.
3. ರಾಜ್ಯದ ಎಲ್ಲಾ (8) ಅಧೀಕ್ಷಕ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವೃತ್ತ ಕಛೇರಿಗಳು.
4. ರಾಜ್ಯದ ಎಲ್ಲಾ (38) ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗಗಳ ಕಾರ್ಯಪಾಲಕ ಇಂಜಿನಿಯರ್‌ಗಳು.

ಪ್ರತಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿ. ವಿಧಾನಸೌಧ ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ, ವಿಧಾನಸೌಧ ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ ಹಾಗೂ ಕಾರ್ಯದರ್ಶಿ, (ಪಂ.ರಾಜ್) ಗ್ರಾಅಪಂ.ರಾಜ್ ಇಲಾಖೆ ಮತ್ತು ಎಲ್ಲಾ ನಿರ್ದೇಶಕರುಗಳು, ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಅಪಂ.ರಾಜ್ ಇಲಾಖೆ, ಇವರ ಆಪ್ತ ಕಾರ್ಯದರ್ಶಿಗಳು / ಆಪ್ತ ಸಹಾಯಕರುಗಳು.
4. ನಿರ್ದೇಶಕರು, SWSM ಹಾಗೂ ಸರ್ಕಾರದ ಪದನಿಮಿತ್ತ ಉಪ ಕಾರ್ಯದರ್ಶಿ ಗ್ರಾಅಪಂ.ರಾಜ್ ಇಲಾಖೆ, ಕಾವೇರಿ ಭವನ, ಬೆಂಗಳೂರು-9.
5. ಮುಖ್ಯ ಸಂಪಾದಕರು, ಕರ್ನಾಟಕ ವಿಕಾಸ, ಗ್ರಾಅಪಂ.ರಾಜ್ ಇಲಾಖೆ, ಬೆಂಗಳೂರು-01.